**ಪ್ರ.ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**(ಸಂಚಾರಿ ನ್ಯಾಯಾಲಯ ಅಜ್ಜಂಪುರ)**

**ಸಿ.ಸಿ ಸಂಖ್ಯೆ ::619/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸುಬ್ಬರಾಜು | **PW**-3 |
| **ತಂದೆಯ ಹೆಸರು** | : | ರಾಮಯ್ಯ | **CW**-8 |
| **ವಯಸ್ಸು** | : | 53 ವರ್ಷ | |
| **ಉದ್ಯೋಗ** | : | ಎ ಎಸ್ ಐ | |
| **ವಾಸಸ್ಥಳ** | : | ಅಜ್ಜಂಪುರ. | |

**ದಿನಾಂಕಃ28-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು 2021 ರಿಂದ ಇಲ್ಲಿಯವರೆಗೂ ಅಜ್ಜಂಪುರ ಪೋಲೀಸ್ ಠಾಣೆಯಲ್ಲಿ, ಎ ಎಸ್ ಐ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತೇನೆ.

ದಿನಾಂಕ 20.102021 ರಂದು ನಾನು ಠಾಣಾ SHO ಆಗಿದ್ದಾಗ ಸಂಜೆ ಸುಮಾರು 06.30 ಗಂಟೆ ಸಮಯದಲ್ಲಿ ಈ ಪ್ರಕರಣದ ಚಾಸಾ 1 ರವರು ಪ್ರಕರಣದ ಆರೋಪಿ ಮಂಜುನಾಥ ರವರು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದು ಅದಕ್ಕೆ ಸಂಬಂಧಪಟ್ಟಂತೆ ದಾಳಿ ನಡೆಸಲಾಗಿ ಕೆಲವು ಸ್ವತ್ತುಗಳನ್ನು ವಶಪಡಸಿಕೊಂಡು ಸ್ವತ್ತುಗಳ ಸಮೇತ ವರದಿ ಹಾಗೂ ಮಹಜರ್ ಅನ್ನು ನೀಡಿದ್ದು, ವರದಿ ಮತ್ತು ಮಹಜರ್ ಆಧಾರದ ಮೇಲೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ, ಪ್ರ.ವ.ವ., ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ಪ್ರಕರಣದ ವರದಿಯನ್ನು ನೋಡಿ ಗುರುತಿಸಿದ್ದು, ವರದಿಯನ್ನು ನಿಪಿ2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಕರಣದ

ಪ್ರ.ವ.ವ. ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು, ಸಾಕ್ಷಿಯ ಸಹಿ 3ಎ ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಸ್ತುಗಳಿಗೆ ಸಂಬಂಧಪಟ್ಟಂತೆ ಠಾಣಾ ಮಾಲುಪಟ್ಟಿ ತಯಾರಿಸಿ ಮುಂದಿನ ಕ್ರಮಕ್ಕಾಗಿ ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಚಾಸಾ9 ರವರಿಗೆ ವರ್ಗಾವಣೆ ಮಾಡಿರುತ್ತೇನೆ.

**:: ಪಾಟೀ ಸವಾಲು :: ಆರೋಪಿತರ ಪರ ಶ್ರೀ. KC ವಕೀಲರಿಂದ ::**

ಚಾಸಾ 1ರವರು ನನ್ನ ಮೇಲಾಧಿಕಾರಿ. ಚಾಸಾ 1ರವರು ನೀಡಿರುವ ಸುಳ್ಳು ವರದಿಯ ಮೇಲೆ ನಾನು ಆರೋಪಿ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ನನ್ನ ಮುಂದೆ ವರದಿ, ಮಹಜರ್ ಮತ್ತು ಮುದ್ದೆ ಮಾಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: